**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 51/2016**

**ಸಿಡಬ್ಲೂಃ20 ಪಿ ಡಬ್ಲ್ಯೂಃ17**

**ಹೆಸರುಃ ಮಂಜುನಾಥ**

**ತಂದೆ ಹೆಸರುಃ ಚೆನ್ನಪ್ಪ ಸವಣೂರು**

**ವಯಸ್ಸುಃ 57 ವರ್ಷಗಳು.**

**ಉದ್ಯೋಗಃ ವ್ಯವಸಾಯ**

**ವಾಸ ಸ್ಥಳಃ ಹಿರೇಬೂದಿಹಾಳ.**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ21.02.2025**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

1. ಚಾಸಾಃ1 ರಿಂದ 5, 7, 9 ರಿಂದ 13, 16 ರಿಂದ 19, 21 ರಿಂದ 28, 30, 33 ರಿಂದ 36 ನನಗೆ ಗೊತ್ತಿಲ್ಲ. ಚಾಸಾಃ6, 8, 14, 15, 17, 29, 31, 32 ರವರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿ 2, 3 ಮತ್ತು 15 ಪರಿಚಯ ಇದೆ. ಆರೋಪಿ 1, 4 ರಿಂದ 6, 8 ರಿಂದ 14 ರವರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಈ ದಿನ ಆರೋಪಿ 1, 4 ರಿಂದ 6, 8 ರಿಂದ 14 ರವರು ಗೈರು ಹಾಜರಾಗಿದ್ದು, ಅವರ ಪರ ವಕೀಲರು ವಿನಾಯತಿ ಅರ್ಜಿ ಸಲ್ಲಿಸಿದ್ದು, ಸದರಿ ಆರೋಪಿಗಳ ಗುರುತಿಗೆ ಯಾವುದೇ ತಕರಾರು ಇರುವುದಿಲ್ಲ ಅಂತ ತಿಳಿಸಿರುತ್ತಾರೆ. ಎಲ್ಲಾ ಆರೋಪಿತರು ತಮ್ಮ ಅಧಿಕಾರಿದ ಅವಧಿಯಲ್ಲಿ ಮನರೇಗಾ ಯೋಜನೆಯಡಿಯಲ್ಲಿ ಸ್ವಲ್ಪ ಕೂಲಿಕಾರ್ಮಿಕರನ್ನು ತೆಗೆದುಕೊಂಡು ಬಹಳಷ್ಟು ಮನರೇಗಾ ಯೋಜನೆ ಪಟ್ಟಿಗಳಲ್ಲಿ ಕೂಲಿಕಾರರನ್ನು ನಮೂದಿಸಿದ್ದು ಹಾಗೂ ಅವರ ಖೊಟ್ಟಿ ಸಹಿಗಳನ್ನು ಮಾಡಿ ಅವರ ಖಾತೆಗೆ ಬಂದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವ ಮೂಲಕ ಸರಕಾರಕ್ಕೆ ಹಾಗೂ ಕೂಲಿಕಾರರಿಗೆ ಮೋಸ ಹಾಗೂ ನಂಬಿಕೆ ದ್ರೋಹವನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

1. ಇಂಗಳಗಿ ಗ್ರಾಮ ಪಂಚಾಯತ ನಮ್ಮ ಹಿರೇಬೂದಿಹಾಳ ಗ್ರಾಮ ಪಂಚಾಯತಿಗೆ ಸೇರಿರುತ್ತದೆ. ಇಂಗಳಗಿ ಗ್ರಾಮ ಪಂಚಾಯತಿ ಇವರಿಂದ ಉದ್ಯೋಗ ಖಾತ್ರಿ ಯೋಜನೆ ಪ್ರಾರಂಭಿಸಿದ್ದು ಆ ಕಾಲಕ್ಕೆ ಹಿರೇಬೂದಿಹಾಳ ಗುರುವಿನಹಳ್ಳಿ ರಸ್ತೆ ನಿರ್ಮಾಣ ಮಾಡಿದ್ದು ಆ ಕೆಲಸಕ್ಕೆ ನಾನು, ನನ್ನ ತಾಯಿ, ನನ್ನ ಹೆಂಡತಿ, ನನ್ನ ಅಣ್ಣ ಹಾಗೂ ಅಣ್ಣನ ಹೆಂಡತಿ ಇವರು ನನ್ನದು ಇಂಗಳಗಿ ಕೆವಿಜಿ ಬ್ಯಾಂಕಿನಲ್ಲಿ ಉಳಿತಾಯ ಖಾತೆ ಇದ್ದು ಅದರ ನಂಃ8806 ಇದ್ದು, ಇನ್ನುಳಿದ ಕೂಲಿಕಾರ್ಮಿಕರೊಂದಿಗೆ ಕೂಲಿ ಕೆಲಸ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಇನ್ನು ಅನೇಕ ಜನರು ಕೆಲಸ ಮಾಡಿರುತ್ತಾರೆ, ನಾಲ್ಕು ಐದು ವರ್ಷಗಳ ಹಿಂದೆ ಹಿರೇಬೂದಿಹಾಳ ಗ್ರಾಮದಿಂದ ಮತ್ತಿಗಟ್ಟಿ ರಸ್ತೆ ನಿರ್ಮಾಣ ಕೆಲಸಕ್ಕೆ ನಾನು, ನನ್ನ ತಾಯಿ, ನನ್ನ ಹೆಂಡತಿ, ನನ್ನಅಣ್ಣ ಮತ್ತು ಅವನ ಹೆಂಡತಿ ರಸ್ತೆ ನಿರ್ಮಾಣ ಕೆಲಸಕ್ಕೆ ಹೋಗಿ ಕೆಲಸ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾಲ್ಕು ಐದು ವರ್ಷದ ಹಿಂದೆ ಎಮ್ ಎ ನದಾಫ ಎಂಬುವವರು ಕಾರ್ಯದರ್ಶಿ ಅಂತ ಕ್ಲರ್ಕ ಎಂದು ಶಂಕರಪ್ಪ ಸಂಗಣ್ಣನವರ, ನೀಲವ್ವ ಭದ್ರಾಪುರ ಎಂಬ ಅಧ್ಯಕ್ಷರಾಗಿ ಕೆಲಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಇದಾದ ನಂತರ ಹಾಜರಾತಿ ಪಟ್ಟಿ ನೋಡಲಾಗಿ ಉದೋಗ್ಯ ಖಾತ್ರಿ ಯೋಜನೆಯಡಿಯಲ್ಲಿ ಕೂಲಿಕಾರರ ಹಾಜರಾತಿ ಪಟ್ಟಿಯನ್ನು ಶಂಕ್ರಪ್ಪ ಸಂಗಣ್ಣನವರ ಇವರು ತಯಾರಿಸಿದ್ದು ಅದರ ನಂಃ766 ಇದ್ದು ಈ ಕೆಸಲಕ್ಕೆ ನಾನು, ನನ್ನ ಹೆಂಡತಿ, ನನ್ನ ತಾಯಿ, ಅಣ್ಣ ಮತ್ತು ಅಣ್ಣನ ಹೆಂಡತಿ ಏಳು ದಿನ ಕೆಲಸ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅ.ನಂಃ81 ಕ್ಕೆ ನನ್ನ ತಾಯಿಯ ಹೆಸರು ಬರೆದು ಜಾಬ್ ಕಾರ್ಡನ ನಂಃ204 ಮುಂದೆ ನನ್ನ ಹೆಸರಿನ ಮುಂದೆ ರೂ 700/ ಕೂಲಿ ಹಣ ಕೊಟ್ಟಂತೆ ನಮೂದಿಸಿ ಆ ಬಗ್ಗೆ ಕನ್ನಡದಿಂದ ಸಹಿ ಮಾಡಿದ್ದು ಆ ಸಹಿ ನನ್ನ ತಾಯಿಯದ್ದು ಅಲ್ಲ ಎಂದರೆ ಸರಿಯಲ್ಲ. ಅ.ನಂಃ82 ಕ್ಕೆ ನನ್ನ ಅಣ್ಣನ ಹೆಸರು ಬರೆದು ಅವನ ಹೆಸರ ಮುಂದೆ ರೂ 700/ ಕೂಲಿ ಹಣ ಕೊಟ್ಟಂತೆ ನಮೂದಿಸಿ ಆ ಬಗ್ಗೆ ಕನ್ನಡದಿಂದ ಸಹಿ ಮಾಡಿದ್ದು ಆ ಸಹಿ ನನ್ನ ಅಣ್ಣನದ್ದು ಅಲ್ಲ ಎಂದರೆ ಸರಿಯಲ್ಲ. ಅ.ನಂಃ83 ಕ್ಕೆ ನನ್ನ ಅಣ್ಣನ ಹೆಂಡತಿ ಹೆಸರು ರೂ 700/ ಕೂಲಿ ಹಣ ಕೊಟ್ಟಂತೆ ನಮೂದಿಸಿ ಆ ಬಗ್ಗೆ ಕನ್ನಡದಿಂದ ಸಹಿ ಮಾಡಿದ್ದು ಆ ಸಹಿ ನನ್ನ ಅಣ್ಣನ ಹೆಂಡತಿಯದ್ದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅ.ನಂಃ84 ಕ್ಕೆ ನನ್ನ ಹೆಸರು ರೂ 700/ ಕೂಲಿ ಹಣ ಕೊಟ್ಟಂತೆ ನಮೂದಿಸಿ ಆ ಬಗ್ಗೆ ಇಂಗ್ಲೀಷದಿಂದ ಸಹಿ ಮಾಡಿದ್ದು ಆ ಸಹಿ ನನ್ನದ್ದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅ.ನಂಃ85 ಕ್ಕೆ ನನ್ನ ಹೆಂಡತಿ ಹೆಸರು ರೂ 700/ ಕೂಲಿ ಹಣ ಕೊಟ್ಟಂತೆ ನಮೂದಿಸಿ ಆ ಬಗ್ಗೆ ಕನ್ನಡದಿಂದ ಸಹಿ ಮಾಡಿದ್ದು ಆ ಸಹಿ ನನ್ನ ಹೆಂಡತಿಯದ್ದು ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಕೂಲಿಕಾರರ ಪಟ್ಟಿಯಲ್ಲಿ ಹಣವನ್ನು ಚೆಕ್ಕ ನಂಃ943502 ದಿಃ07.09.2010 ರಂದು ಮೊತ್ತ ರೂ 72,821/- ಇದ್ದು, ಈ ಹಣವನ್ನು ಜಮಾ ಮಾಡಬೇಕು ಅಂತ ಈ ಚೆಕ್ಕಿನ ಸಂಗಡ ಬ್ಯಾಂಕಿಗೆ ಕೊಟ್ಟ ಲಿಸ್ಟನಲ್ಲಿ ಅ.ನಂಃ8 ಕ್ಕೆ ನನ್ನ ತಾಯಿಯ ಹೆಸರನ್ನು ನಮೂದಿಸಿ, ನನ್ನ ತಾಯಿಯ ಅಕೌಂಟ ನಂಃ8806 ಅಂತ ಬರೆಯಲಾಗಿ ಈ ಲಿಸ್ಟ ಪ್ರಕಾರ ರೂ 6600/- ಜಮಾ ಮಾಡಲು ಪಂಚಾಯತ ಇವರು ಬರೆಯಲಾಗಿ ಈ ಹಣ ನನ್ನ ತಾಯಿಯ ಅಕೌಂಟ ಸ್ಟೇಟಮೆಂಟನಲ್ಲಿ ನೋಡಿದಾಗ ದಿಃ08.10.2010 ರಂದು ಜಮೆಯಾಗಿದ್ದು ಇರುತ್ತದೆ ಎಂದರೆ ಸರಿಯಲ್ಲ. ಮೇಲಿನ ಹಣವನ್ನು ನನ್ನ ತಾಯಿಯು ಬ್ಯಾಂಕಿನಿಂದ ದಿಃ09.10.2010 ರಂದು ತೆಗೆಯಿಸಿ ಸದರ ಹಣದಲ್ಲಿ ಒಟ್ಟು ರೂ 3500/ಕೂಲಿ ಹಣ ಮುರಿದುಕೊಂಡು ಬಾಕಿ ಉಳಿದ ಹಣ ರೂ 3100/ ಗಳನ್ನು ಪಿಡಿಓ ರವರ ಹೇಳಿಕೆಯಂತೆ ಗ್ರಾಮ ಪಂಚಾಯತಿ ಕ್ಲರ್ಕ ಶಂಕ್ರಪ್ಪ ಇವರು ಕಡೆಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ತಾಯಿಗೆ ಬಿಪಿ ಹೆಚ್ಚಿಗೆ ಆಗಿ ಅವಳ ಹೃದಾಯಾಗತಾದಿಂದ ದಿಃ28.08.2014 ರಂದು ತೀರಿಕೊಂಡಿರುತ್ತಾರೆ, ಈ ಬಗ್ಗೆ ಮರಣ ಉತಾರವನ್ನು ಪಡೆದು ಅದರ ಪ್ರತಿಯನ್ನು ಮತ್ತು ನನ್ನ ಬ್ಯಾಂಕಿನ ಪಾಸ್ ಪುಸ್ತಕ ಪ್ರತಿಯನ್ನು ಹಾಗೂ ಒಂದು ಬಿಳೆ ಹಾಳಿಯಲ್ಲಿ ನನ್ನ ಮಾದರಿ ಸಹಿಗಳನ್ನು ಮಾಡಿ ತಮ್ಮ ಕಡೆಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಎಮ್ ಎ ನದಾಫ ಕಾರ್ಯದರ್ಶಿ ಇವರು , ಕ್ಲರ್ಕ ಶಂಕ್ರಪ್ಪ ಹಾಗೂ ಅಧ್ಯಕ್ಷರಾದ ಮಮ್ತಾಜಬೇಗಂ, ಪಿಡಿಓ ಶೆಟ್ಟೆಣ್ಣವರ ಇವರು ಮೀಲಾಪೆಯಾಗಿ ತಮ್ಮ ಸ್ವಂತ ಲಾಭಕ್ಕಾಗಿ ನನ್ನ ಖಾತೆಗೆ ಬೇರೆ ಕೂಲಿಕಾರರ ಹಣ ಜಮಾ ಮಾಡಿರುವುದಾಗಿ ಸುಳ್ಳು ಹೇಳಿ ನಂಬಿಸಿ ನಮ್ಮಿಂದ ರೂ 3100/- ರೂಪಾಯಿಗಳನ್ನು ಪಡೆದುಕೊಂಡು ತಮ್ಮ ಸ್ವಂತಕ್ಕೆ ದುರುಪಯೋಗ ಮಾಡಿಕೊಂಡು ನನಗೆ ಮತ್ತು ಸರಕಾರಕ್ಕೆ ಹಾಗೂ ಕೂಲಿ ಕಾರ್ಮಿಕರಿಗೆ ಮೋಸ ಮತ್ತು ನಂಬಿಕೆ ದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಎಲ್ಲಾ ಸಂಗತಿಗಳು ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿಕೆಯನ್ನು ನಿಪಿಃ24 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**